ಅಧ್ಯಕ್ಷರು.—ಈಗ ನಿಯಮ ೩೭೪ರ ಕೆಳಗೆ ಚರ್ಚೆ.

ಈ ಕೆಳಕಂಡ ಮಾನ್ಯ ಸದಸ್ಯರುಗಳು ಸಭೆಯಲ್ಲಿ ಹಾಜರಿಲ್ಲ

ಶ್ರೀಯುತರುಗಳಾದ.—

ಜಿ. ರಾಮದಾಸ್
ಬಿ. ನಾರಾಯಣಸ್ವಾಮಿ
ವಿನಯಕುಮಾರ್ ಸೊರಕೆ
ಮಹಮದ್ ಲೈಕುದ್ದೀನ್
ಜಿ. ಎಸ್. ಆಚಾರ್
ಎಸ್. ಜಿ. ನಂಜಯ್ಯನ ಮಠ್
ಎಂ. ಶಿವಣ್ಣ,
ಮಾಲಿಕಯ್ಯ ವಿ. ಗುತ್ತೇದಾರ್
ಕೆ. ಜೆ. ರಾಮಸ್ವಾಮಿ
ಶರಣಬಸಪ್ಪ ಗಾಲಿ ಪಾಟೀಲ
ಕೆ. ಬಿ. ಕೋಳೀವಾಡ
ಬಿ. ಆರ್. ನೀಲಕಂಠಪ್ಪ

ನಿಯಮ ೩೭೪ರ ಮೇರೆಗೆ

ರೈತರಿಗೆ ಬೆಳೆ ವಿಮೆಯನ್ನು ವಿಮಾ ಕಂಪನಿಯವರು ಕೊಡದಿರುವ ಬಗ್ಗೆ.

ಶ್ರೀ ಎಸ್. ನಂಜಪ್ಪ.—ಅಧ್ಯಕ್ಷರೇ, ಮೈಸೂರು **ಜಿಲ್ಲೆಯ** ಕೃಷ್ಣರಾಜನಗರದ **ತಾಲ್ಲೂಕಿನ** ಮುಖ್ಯ ಬೆಳೆಯಾದ ಭತ್ತ ಮತ್ತು ರಾಗಿ ಫಸಲಿಗೆ ಬೆಳೆ ವಿಮೆ **ಜಾರಿಯಲ್ಲಿದ್ದು** ಸಾವಿರಾರು ಜನ **ರೈತರ,** ಭತ್ತದ **ಬೆಳೆಗೆ** ಬೆಂಕಿ ರೋಗ ತಗಲಿದ್ದುದರಿಂದಲೂ ಅತಿವೃಷ್ಟಿಯಿಂದಲೂ **ಕೋಟ್ಯಾಂತರ** ರೂಪಾಯಿಗಳ **ಭತ್ತ, ಬೆಳೆ** ನಾಶವಾಗಿದ್ದರೂ, **ಬೆಳೆ** ವಿಮೆ **ಮಾಡಿಸಿದ** ರೈತನಿಗೆ ವಿಮೆ ಹಣ ಹೊಂದಲು **ತಾಲ್ಲೂಕಿನ** ಒಟ್ಟು ಬೆಳೆಯಲ್ಲಿ ನಾಲ್ಕನೇ ಒಂದಂಕ್ಕಿಂತ ಕಮ್ಮಿ ಬೆಳೆಯಾಗಿರಬೇಕೆಂದು ಅನ್ಯಾಯದ ನಿಯಮದ **ಕಾರಣ ರೈತರಿಗೆ ಬೆಳೆ** ವಿಮೆಯನ್ನು ವಿಮಾ ಕಂಪನಿಯವರು ಕೊಡುತ್ತಿಲ್ಲ. ಈ ಬಗ್ಗೆ ಕೃಷಿ ಖಾತಾ ಸಚಿವರು ಗಮನ ಸೆಳೆಯುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.—ಇವತ್ತು **ಕಾನೂನು** ಆ ರೀತಿ ಇರುವುದರಿಂದ **ತೊಂದರೆ** ಆಗುತ್ತಾ ಇದೆ. ತಾಲ್ಲೂಕನ್ನು ಒಂದು ಘಟಕ ಎಂದು **ಮಾಡಿರುವುದರಿಂದ ರೈತರಿಗೆ** ತೊಂದರೆಯಾಗುತ್ತಿದೆ. ಈ ನಿಯಮದಲ್ಲಿ ಬದಲಾವಣೆ **ಮಾಡುವ ಬಗ್ಗೆ** ನಾವು ಕೇಂದ್ರ ಸರ್ಕಾರಕ್ಕೆ ವಿನಂತಿ **ಮಾಡಿಕೊಳ್ಳುತ್ತಿದ್ದೇವೆ.** ಈ ನಿಯಮವನ್ನು ಹೋಬಳಿ ಅಥವಾ ಗುಂಡಲ ಘಟಕದ ಮಟ್ಟದಲ್ಲಿ ತಂದರೆ ಒಳ್ಳೆಯದೆಂದು ನಾವು ಹೇಳಿದ್ದೇವೆ.

(ಶ್ರೀ ಗೋಪಾಲ ಮುಕುಂದ ಕಾನಡೆಯವರು ಗೈರುಹಾಜರಿ)